<u>ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ; ನ್ಯಾಯಾಲಯ,</u> ಶ್ರೀರಂಗಪಟ್ಟಣ.

ಸಿ.ಸಿ.ಃ 193/2013

ಪಿ. ಡಬ್ಲ್ಯು: 01

ಸಿ. ಡಬ್ಲ್ಯು: 01

ಸಾಕ್ಷಿದಾರರ ಹೆಸರು : ಭಾಸ್ಕರ್

ತಂದೆ/ಪತಿಯ ಹೆಸರು : ಮರೀಗೌಡ

ವಯಸ್ಸು : 42 ವರ್ಷ

ವೃತ್ತಿ : ಎಳನೀರು ಕುಯಿವ ಕೆಲಸ

ವಾಸ : ಅರಕೆರೆ ಗ್ರಾಮ

ಸಾಕ್ಷಿಗೆ ಪ್ರಮಾಣ ವಚನ ಮಾಡಿಸಿದ ದಿನಾಂಕಃ

14.03.2022

ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ರವರಿಂದ

ಮೃತ ಪ್ರಸನ್ನ ರವರು ನನಗೆ ಗೊತ್ತು. ಅವರು ಕರೆಂಟ್ ಶಾಕ್ ನಿಂದ ಸತ್ತಿದ್ದಾರೆ. ದಿಃ 10.12.2012 ರಂದು ಬೆಳಿಗ್ಗೆ 08.00-08.30 ಸಮಯದಲ್ಲಿ ಪಿ.ಹಳ್ಳಿಯ ದೇವಸ್ಥಾನದ ಹತ್ತಿರ ಕಬ್ಬಿನ ಗದ್ದೆಯ ಹತ್ತಿರ ನಾನು ಮತ್ತು ಮೃತ ಪ್ರಸನ್ನ ರವರು ಎಳನೀರು ಕುಯಿವ ಸಲುವಾಗಿ ಹೋಗುತ್ತಿದ್ದೇವು. ಅಲ್ಲಿ ಕಟ್ ಆಗಿದ್ದ ಕರೆಂಟ್ ವೈರ್ ನೆಲದ ಮೇಲೆ ಬಿದ್ದಿತ್ತು. ನನ್ನ ಮುಂದೆ ಪ್ರಸನ್ನ ನಡೆದುಕೊಂಡು ಹೋಗುತ್ತಿದ್ದಾಗ ಬಿದಿದ್ದ ಕರೆಂಟ್ ವೈರ್ ಆತನ ಕಾಲಿಗೆ ತಗುಲಿ ಅವನಿಗ ಶಾಕ್ ಹೊಡೆಯಿತು. ಶಾಕ್ ಹೊಡೆದು ಆತ ಬಿದ್ದು ಓದಾಡುತ್ತಿದ್ದ ಆಗ ನಾನು ಅಲ್ಲಿಂದ ಹೊರಟುಹೋದೆ. ಅದೇ ದಿನ ಬೆಳಿಗ್ಗೆ 10.00-10.15 ಗಂಟೆ ಸಮಯದಲ್ಲಿ ಘಟನೆ ಸಂಬಂಧ ನಾನು ಪೋಲೀಸರಿಗೆ ದೂರನ್ನು ನೀಡಿದ್ದೇನೆ. ನಂತರ ಪೋಲೀಸರು 10.30-11.00 ಗಂಟೆ ಸಮಯದಲ್ಲಿ ಬಂದು ಮಹಜರ್ ಮಾಡಿರುತ್ತಾರೆ. ನಾನು ಮಹಜರ್ ಗೆ ಸಹಿ ಮಾಡಿದ್ದೇನೆ. ನನ್ನ ಸಂಗಡ ಮಹಜರ್ ಗೆ ನಿಂಗಯ್ಯ ಮತ್ತು ಶ್ರೀಧರ್ ಸಹಿ ಮಾಡಿರುತ್ತಾರೆ. ಘಟನಾ ಸ್ಥಳದಿಂದ ಪೋಲೀಸರು ಮೃತ ಪ್ರಸನ್ನ ಶವವನ್ನು ಹಾಗೂ ಆತನಿಗೆ ಸಂಬಂಧಪಟ್ಟ ಮೊಬೈಲ್ ಅನ್ನು ತೆಗೆದುಕೊಂಡು ಹೋಗಿರುತ್ತಾರೆ.

ವಿದ್ಯುತ್ ಇಲಾಖೆಯವರ ತಪ್ಪಿನಿಂದ ಪ್ರಸನ್ನ ಮೃತನಾಗಿರುತ್ತಾನೆ. ನನಗೆ ವಿದ್ಯುತ್ ಇಲಾಖೆಯ ಅಧಿಕಾರಿ ಯಾರೆಂದು ಗೊತ್ತಿರುವುದಿಲ್ಲ. ಪೋಲೀಸರಿಗ ನಾನು ಕೊಟ್ಟಿದ್ದ ದೂರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ.1 ಮತ್ತು ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ.1.ಎ. ಎಂದು ಗುರುತಿಸಲಾಯಿತು. ಸಾಕ್ಷಿ ಮಹಜರ

ನೋಡಿ ಗುರುತಿಸಿದ್ದು ಅದನ್ನು ನಿಪಿ.2 ಎಂದು ಹಾಗೂ ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ.2.ಎ. ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಂದು ಪರಿಗಣಿಸಿ ಪಾಟಿ ಸವಾಲು ಅನುಮತಿ ನೀಡುವಂತೆ ಪ್ರಾರ್ಥಿಸಿದ್ದು ನೀಡಲಾಗಿದೆ)

**ಪಾಟಿ ಸವಾಲುಃ ಮಾನ್ಯ ಸ.ಸ.ಅ ರವರಿಂದ**

ಆರೋಪಿಯನ್ನು ನಾನು ನೋಡಿಲ್ಲ. ನಿಪಿ.2 ಕ್ಕೆ ಮಹಜರ್ ಕಾಲದಲ್ಲಿ ಆನಂದ್, ನಾಗರಾಜು, ರಘು ಹಾಗೂ ಮಂಜು ರವರು ಸಹ ಹಾಜರಿದ್ದು ಸಹಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಮಹಜರ್ ಕಾಲದಲ್ಲಿ ಪೋಲೀಸರು ವಿದ್ಯುತ್ ಕಂಬದ ವೈರ್ ಗಳನ್ನು ಸಹ ವಶಪಡಿಸಿಕೊಂಡಿದ್ದರು ಎಂದರೆ ಸರಿ. ಪೋಲೀಸರು ವಶಪಡಿಸಿಕೊಂಡಿದ್ದ ವಿದ್ಯುತ್ ಕಂಬದ ವೈರ್ ನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ವಿದ್ಯುತ್ ವೈರ್ ನೋಡಿ ಗುರುತಿಸಿದ್ದು ಅದನ್ನು ಮು.ಮಾಲು.1 ಎಂದು ಗುರುತಿಸಲಾಯಿತು. ಪ್ರಸನ್ನ ರವರ ಮರಣಕ್ಕೆ ವಿದ್ಯುತ್ ಇಲಾಖೆಯ ನಿರ್ಲಕ್ಷ್ಯತನವೇ ಕಾರಣವೆಂದರೆ ಸರಿ.

**ಪಾಟಿ ಸವಾಲುಃ ಆರೋಪಿ ಪರ ವಕೀಲರಿಂದ**

ದೂರನ್ನು ನಾನು ಘಟನಾ ಸ್ಥಳದಲ್ಲೇ ಬರೆಸಿಕೊಟ್ಟಿದ್ದೇನೆ. ದೂರನ್ನು ಪೋಲೀಸ್ ನವರೇ ಬರೆದಿದ್ದಾರೆ. ದೂರಿನಲ್ಲಿ ಏನು ಬರೆದರು ಎನ್ನುವ ಮಾಹಿತಿ ನನಗೆ ಇಲ್ಲ. ದೂರನ್ನು ಬರೆದ ನಂತರ ಸಹಿ ಮಾಡಿ ಎಂದ ಕಾರಣಕ್ಕೆ ನಾನು ನಿಪಿ.1 ಕ್ಕೆ ಸಹಿ ಮಾಡಿದ್ದೇನೆ. ನಾವು ಎಳನೀರು ಕುಯ್ಯಲು ಹೋದ ತೋಟದ ಮಾಲೀಕರ ಹೆಸರು ಪಿ.ಹಳ್ಳಿಯ ಕರಿಯಪ್ಪ. ಸದರಿ ಕರಿಯಪ್ಪನವರು ತೋಟದಲ್ಲಿ ಘಟನಾ ಸಮಯದಲ್ಲಿ ಇರಲಿಲ್ಲ. ನನ್ನ ಮತ್ತು ಪ್ರಸನ್ನ ರವರ ಮಧ್ಯೆ ಸುಮಾರು 2-3 ಮಿ. ಅಂತರವಿತ್ತು. ಪ್ರಸನ್ನನವರಿಗೆ ವಿದ್ಯುತ್ ವೈರ್ ಯಾವ ರೀತಿ ತಗುಲಿತ್ತು ಎಂದು ನನಗೆ ಗೊತ್ತಿಲ್ಲ. ಪೋಲೀಸರು ಸ್ಥಳಕ್ಕೆ ಬಂದಾಗ ನಿಂಗಯ್ಯ ,ನಾನು ಹಾಗೂ ಶ್ರೀಧರ್ ಇದ್ದೇವು. ನಿಪಿ.2 ಮಹಜರ್ ನಲ್ಲಿ ಪೋಲೀಸರು ಏನು ಬರೆದುಕೊಂಡರು ಎಂದು ನನಗೆ ಗೊತ್ತಿಲ್ಲ ಕಾರಣ ನನಗೆ ಓದಲು ಬರುವುದಿಲ್ಲ. ನ್ಯಾಯಾಲಯದ ಮುಂದಿರುವ ಮು.ಮಾಲು.1 ಅನ್ನು ಯಾರು ಕೊಟ್ಟರು ಎಂದು ನನಗೆ ಗೊತ್ತಿಲ್ಲ. ನ್ಯಾಯಾಲಯದ

ಮುಂದಿರುವ ವಿದ್ಯುತ್ ವೈರ್ ಸಾಮಾನ್ಯವಾಗಿ ವಿದ್ಯುತ್ ಸರಬರಾಜು ಇರುವ ಕಡೆ ಅಳವಡಿಸಿರುತ್ತಾರೆ ಎಂದರೆ ಸರಿ.

ನಾನು ಮುಂಚಿನಿಂದಲೂ ಮೃತ ಪ್ರಸನ್ನ ರವರ ಜೊತೆ ಕೆಲಸ ಮಾಡುತ್ತಿದ್ದೆ ಎಂದರೆ ಸರಿ. ನಾನು ಘಟನಾ ದಿನ ಸ್ಥಳದಲ್ಲಿ ಇರಲಿಲ್ಲ ಎಂದರೆ ಸುಳ್ಳು. ನಾನು ಮೃತ ಪ್ರಸನ್ನ ರವರ ಕೈ ಕೆಳಗೆ ಕೆಲಸ ಮಾಡುತ್ತಿದ್ದ ಕಾರಣ ಅವರ ಕುಟುಂಬಕ್ಕೆ ಪರಿಹಾರ ಸಿಗಲಿ ಎನ್ನುವ ಕಾರಣಕ್ಕೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ., ಶ್ರೀರಂಗಪಟ್ಟಣ.